ಭೈರದೇವರಗುಡ್ಡದಿಂದ ರಾತ್ರಿ ಕಳೆಯುವುದರೊಳಗೆ ಕರುವಿನಕಟ್ಟೆಗೆ ಬಂದ ಹನುಮಕ್ಕ ಮತ್ತು ತಂಗಿ ಸುಭದ್ರಮ್ಮ ಇಬ್ಬರೂ ಅನ್ನಪೂರ್ಣ ಈ ರೀತಿ ಯಾರಿಗೂ ಸುಳಿವು ನೀಡದೆ ಮಾಡಿದ ಹೇಯ ಕೃತ್ಯದ ಬಗ್ಗೆ ಬಹಳ ಚಿಂತಾಕ್ರಾಂತರಾಗಿದ್ದರು. ಇಬ್ಬರೂ ಇದೇ ಯೋಚನೆಯಲ್ಲಿ ಊಟವನ್ನೂ ಮಾಡದೆ ನಿದ್ದೆಗೆಟ್ಟದ್ದರಿಂದ ಅವರ ಕಣ್ಣುಗಳು ಕೆಂಡದುಂಡೆಯಂತೆ ಕಾಣುತ್ತಿದ್ದವು. ಗಂಟೆ ಹತ್ತಾದರೂ ಬಾಯಿ ತೊಳೆಯದೇ ತನ್ನ ಉಡುಚೀಲದಲ್ಲಿದ್ದ ಬಾಡಿದ ಎಲೆ ತೆಗೆದು ಒರೆಸಿಕೊಳ್ಳುತ್ತಾ ಅಡಿಕೆ ಚೂರನ್ನು ಬಾಯಿಗೆ ಹಾಕಿಕೊಂಡು ಹೊರಳಾಡಿಸುತ್ತಾ ಸೆರಗನ್ನು ತಲೆ ಮೇಲೆ ಹಾಕಿಕೊಂಡು ಎಳೆ ಬಿಸಿಲಿನಲ್ಲಿ ಮನೆ ಮುಂದಿನ ಗಿಡದ ಕೆಳಗೆ ಕುಳಿತರು. ಸುಭದ್ರಮ್ಮ, ಪರಮೇಶ್ವರಪ್ಪ ಕೊಟ್ಟಿದ್ದ ಮಂತ್ರಿಸಿದ ನಿಂಬೆಹಣ್ಣು ತನ್ನ ಉಡುಚೀಲದಲ್ಲಿ ಇಟ್ಟುಕೊಂಡಿದ್ದು ಅದು ಇರುವುದನ್ನು ಮತ್ತೆಮತ್ತೆ ಮುಟ್ಟಿನೋಡಿಕೊಂಡು ಖಾತರಿಪಡಿಸಿಕೊಳ್ಳುತ್ತಿದ್ದಳು. ರಾತ್ರಿ ಹೊತ್ತು ಒಂದು ಅರಗಳಿಗೆ ಕಣ್ಣುಮುಚ್ಚಿಕೊಂಡಾಗ ಇದೇ ಮಂತ್ರಿಸಿದ ನಿಂಬೆಹಣ್ಣು ಮಗಳನ್ನು ತನ್ನ ಮೇಲೆ ಕುಳ್ಳಿರಿಸಿಕೊಂಡು ರೆಕ್ಕೆಬೀಸಿ ತನ್ನೆಡೆಗೆ ಬರುತ್ತಿರುವಂತೆ ಅವಳಿಗೆ ಕನಸು ಬೀಳುತ್ತಿತ್ತು! ಅದೇ ಊರಿನ ಗೊಂಚಿಗಾರ್ ಗಂಗಣ್ಣನ ಮಗ ವೀರೇಂದ್ರ ಮೈಸೂರಿನಲ್ಲಿ ಪ್ಯಾರಮೆಡಿಕಲ್ ಓದಿ ಅಲ್ಲಿಯೇ ಖಾಸಗಿ ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ. ಆಕಸ್ಮಿಕವಾಗಿ ಅರಮನೆ ಮುಂಭಾಗದ ಸರ್ಕಲ್ಲಿನಲ್ಲಿ ತಮ್ಮ ಊರಿನ ಅನ್ನಪೂರ್ಣ ಮತ್ತು ಶ್ರೀಕಂಠ ಪರಸ್ಪರ ಕೈಹಿಡಿದು ನಡೆದುಕೊಂಡು ಹೋಗುತ್ತಿದ್ದುದನ್ನ ನೋಡಿ ಅವಕ್ಕಾದ. ನಮ್ಮೂರಿನ ಇವರು ಮೈಸೂರಿಗೆ ಯಾಕೆ ಬಂದಿರಬಹುದೆಂದು ಆಶ್ಚರ್ಯಪಟ್ಟು ತನ್ನೊಳಗೆ ಎದ್ದ ಹತ್ತಾರು ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲಾಗದೆ ಕೊಂಚ ತಬ್ಬಿಬ್ಬಾಗಿದ್ದ. ಹೇಗಾದರೂ ಇರಲಿ ತನ್ನೂರಿನಿಂದ ಬಂದಿರುವ ಅವರನ್ನು ರಸ್ತೆ ದಾಟಿ ಮಾತನಾಡಿಸಬೇಕೆಂಬುವಷ್ಟರಲ್ಲಿ, ರಸ್ತೆ ದಾಟಲು ಸಾಧ್ಯವಾಗದೆ ಹಾಗೆಯೇ ನಿಂತಿದ್ದಾಗ ಅನ್ನಪೂರ್ಣ ಮತ್ತು ಶ್ರೀಕಂಠ ಕ್ಷಣ ಮಾತ್ರದಲ್ಲಿ ಅಲ್ಲಿಂದ ಮರೆಯಾದರು ಎಂಬ ವಿಷಯವನ್ನು ಮನೆಗೆ ಫೋನ್ ಮೂಲಕ ಅಂದೇ ತಿಳಿಸಿದ್ದ. ಗೊಂಚಿಗಾರ್ ಗಂಗಣ್ಣನ ಹೆಂಡತಿ ಶಕುಂತಲಮ್ಮ ಮಗ ಹೇಳಿದ ಈ ವಿಷಯವನ್ನು ಅನ್ನಪೂರ್ಣಳ ಗಂಡ ಕರಿವೀರನಿಗೆ, ಅವಳ ಅಮ್ಮನಿಗೆ ಹೇಳಲೋ ಬೇಡವೋ ಎಂಬ ತಾಕಲಾಟಕ್ಕೆ ಬಿದ್ದಳು. ಹೇಳಿದರೆ ಹೇಗೆ ಹೇಳುವುದು? ಏನೆಂದು ಹೇಳುವುದು? ಹೀಗೆ ಹೇಳಿದರೆ ನಮ್ಮ ಬಗ್ಗೆ ಅವರು ಏನು ತಿಳಿಯುತ್ತಾರೋ? ಏನೋ ಎಂದು ಎರಡು-ಮೂರು ದಿನ ತನ್ನೊಳಗೇ ಲೆಕ್ಕಹಾಕಿಕೊಂಡು ಚಡಪಡಿಸಿದಳು. ವೀರೇಂದ್ರ ಈ ವಿಷಯ ತಿಳಿಸಿ ಎರಡು-ಮೂರು ದಿನವಾದರೂ ಅಂದರೆ ಹನುಮಕ್ಕ ಮತ್ತು ಸುಭದ್ರಮ್ಮ ಭೈರದೇವರಗುಡ್ಡಕ್ಕೆ ಹೋಗುವ ದಿನದಂದೇ ತಿಳಿದಿದ್ದರೂ ಊರಲ್ಲಿ ಯಾರೊಂದಿಗೂ ಹೇಳದೇ ಮನಸ್ಸಿನಲ್ಲೇ ಇಟ್ಟುಕೊಂಡಿದ್ದಳು. ಇದೇ ತಾಕಲಾಟದಲ್ಲಿ ಊಟ ಮಾಡುತ್ತಾ ಮಗ ಹೇಳಿದ ವಿಷಯವನ್ನು ಅವರಿಗೆ ಇಂದು ಹೇಳೀಯೇ ಬಿಡೋಣ 'ಇಬ್ಬರು ಸಣ್ಣ ಮಕ್ಕಳನ್ನು ಬಿಟ್ಟು ಹೋಗಿದ್ದಾಳೆ. ಈ ವಯಸ್ಸಿನಲ್ಲಿ ಹರೆಯದ ಹುಡುಗನ ಜೊತೆ ಓಡಿಹೋಗುವಂಥ ತೆವಲು ಆಕೆಗೇನು ಬಂದಿತ್ತೋ? ಮನೆಹಾಳುಮುಂಡೆ ಎಂಥ ಉಚ್ಚ ಕೆಲಸ ಮಾಡಿದಳು' ಎಂದು ಬೈದುಕೊಂಡು ಊಟ ಮುಗಿಸಿ ಕರಿವೀರನ ಮನೆಯ ಕಡೆ ಹೆಜ್ಜೆ ಹಾಕಿದಳು.

ಮನೆಯ ಮುಂದೆ ಎಲೆ ಅಡಿಕೆ ಜಗಿಯುತ್ತಾ ಸಪ್ಪೆ ಮೋರೆ ಮಾಡಿ ಕುಳಿತಿದ್ದ ಹನುಮಕ್ಕಳನ್ನು ಕಂಡ ಶಕುಂತಲಮ್ಮ, ಊರಿಂದ ಯಾವಾಗ ಬಂದೆ ಹನುಮಕ್ಕ? ಎನ್ನುತ್ತಾ ಅಂಗಳದಲ್ಲಿ ನಿಂತಳು. ಮೊನ್ನೆ ಬಂದೆನಮ್ಮ ಎನ್ನುತ್ತಾ ಮೇಲೇಳುತ್ತಾ ಮನೆಯೊಳಗೆ ಕುಳಿತುಕೊಳ್ಳುವಂತೆ ಕರೆದಳು. ಮನೆ ಮುಂದಿನ ಶೀಟಿನ ಕೆಳಗಿನ ಕಟ್ಟೆಯ ಮೇಲೆ ಕುಳಿತುಕೊಳ್ಳುತ್ತಾ ಮನೆಯ ಸುತ್ತಮುತ್ತ ಯಾರೂ ಇಲ್ಲದಿರುವುದನ್ನು ಖಾತರಿಪಡಿಸಿಕೊಂಡು, ಮೆಲ್ಲಗಿನ ದನಿಯಲ್ಲಿ ತನ್ನ ಮಗ ಹೇಳಿದ ಸುದ್ದಿಯನ್ನು ಹನುಮಕ್ಕನ ಕಿವಿಗೆ ನೋವಾಗದಂತೆ ಅರುಹಿದಳು. ಇದನ್ನ ಕೇಳಿಸಿಕೊಂಡ ಹನುಮಕ್ಕ ಮತ್ತು ಸುಭದ್ರಮ್ಮ ಇಬ್ಬರೂ ಮನದಲ್ಲಿಯೇ ಮಂತ್ರವಾದಿ ಪರಮೇಶ್ವರಪ್ಪನ ಮಂತ್ರಶಕ್ತಿಯನ್ನು ಗೌರವದಿಂದ ನೆನೆದರು. ಈಗಲೇ ಮಗ ಕರಿವೀರನನ್ನು ಮೈಸೂರಿಗೆ ಕಳಿಸಲು ನಿರ್ಧರಿಸಿದಳು. ಇಂತಹ ಒಳ್ಳೇ ಸುದ್ದಿ ತಿಳಿಸಿದ ಶಕುಂತಲಮ್ಮನಿಗೆ 'ನಿನಗೆ ಒಳ್ಳೆದಾಗಲಮ್ಮ' ಎಂದು ಅರಸುತ್ತಾ ಬೇಡ ಬೇಡವೆಂದರೂ ಹನುಮಕ್ಕ ಅವಳಿಗೆ ಕುಡಿಯಲು